# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.236/2023**

**CW :9 PW: 08**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 05/08/2026**

| | | |
|---|---|---|
| ಹೆಸರು | : | ಶಿವಲಿಂಗಪ್ಪ |
| ತಂದೆಯ ಹೆಸರು | : | ಬಸವರಾಜ ಬೆಳ್ಳಿ |
| ವಯಸ್ಸು | : | 53 |
| ಉದ್ಯೋಗ | : | ಎ.ಎಸ್.ಐ ಕಮಲಾಪೂರ ಪೊಲೀಸ್ ಠಾಣೆ |
| ವಾಸಸ್ಥಳ | : | ಕಮಲಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಮಾಡಬೂಳ ಪೋಲೀಸ್ ಠಾಣೆಯಲ್ಲಿ 2017 ರಿಂದ 2023 ರವರೆಗೆ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26/01/2023 ರಂದು ನಾನು ಠಾಣಾ ಕರ್ವ್ಯದಲ್ಲಿರುವಾಗ ಚಾಸಾ-1 ರವರು ಖುದ್ದಾಗಿ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವಿಕರಿಸಿಕೊಂಡು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಮೋಕದ್ದಮೆ ಸಂಖ್ಯೆ 05/2023 ರಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ,ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ದಿಃ 26/01/2023 ರಂದು ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 3-30 ರಿಂದ 4-30 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ನಾನು ಒಂದು ಫೋಟೊವನ್ನು ತೆಗೆದಿರುತ್ತೇನೆ. ದಿಃ 29/01/2023 ರಂದು ಆರೋಪಿತರಿಗೆ ನೋಟಿಸನ್ನು ನೀಡಿರುತ್ತೇನೆ ಅದರಂತೆ ಆರೋಪಿತರು ಠಾಣೆಗೆ ಹಾಜರಾಗಿರುತ್ತಾರೆ ಅವರ ವಿರುದ್ದ ದಸ್ತಗೀರ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 06/03/2023 ರಂದು ತನಿಖೆಯು ಪೂರ್ಣಗೊಂಡ ಕಾರಣ ಆರೋತಪಿರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರ ದಾಖೆಯನ್ನು ನೋಡಿ ಗರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರ ದಾಖಲೆಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಆರೋಪಿತರ ಮತ್ತು ಚಾಸಾ-1 ರವರ ಮಧ್ಯ ಆಸ್ತಿ ವ್ಯಾಜ ಇರುತ್ತದೆ. ನಾನು ಆಸ್ತಿ ವ್ಯಾಜದ ಕುರಿತು ಯಾವುದೇ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ನಾನು ಆಸ್ತಿ ವ್ಯಾಜದ ಕುರಿತು ವಿಚಾರಣೆ ಮಾಡಿರುವುದಿಲ್ಲ. ಚಾಸಾ-1 ರವರನ್ನು ದೂರನ್ನು ನೀಡುವಾಗ ಮದ್ಯಾಹ್ನ 12-30 ಕ್ಕೆ ಬಂದಿದ್ದರು ಅವರ ಜೊತೆ ಯಾರು ಇರಲಿಲ್ಲ. ಗಲಾಟೆಯು 2 ದಿನಗಳ ಹಿಂದೆ ಆಗಿರುತ್ತದೆ. ಠಾಣೆಯಿಂದ ಗುನ್ನಾ ಸ್ಥಳ 10 ಕಿ.ಮೀಟರ ದೂರದಲ್ಲಿದೆ. ಗುನ್ನ ಸ್ಥಳಕ್ಕೆ ನಾವು ಮದ್ಯಾಹ್ನ 3-00 ಕ್ಕೆ ಹೋಗಿರುತ್ತೇನೆ. ನಾನು ಸುಳ್ಳು ಪಂಚನಾಮೆಯನ್ನು ತಯಾರಿಸಿ ಸುಳ್ಳು ಫೋಟೊವನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧವನ್ನು ಮಾಡದೇ ಇದ್ದರು ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಚಾಲಕರು ಎಂದು ಕೆಲಸ ಮಾಡುತ್ತಿದ್ದರಿಂದ ಅವರು ಸುಳ್ಳು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 6 ನೇ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**